Regd No. M. 1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 30 ಸಂಚಿಕೆ 152] ಬುಧವಾರ 12—2—47 [ಬಿಡಿ ಪ್ರತಿ 3 ಪೈ

ಜಪಾನಿನಲ್ಲಿ ಆಟಂ ಪರಿಶೋಧನಾ ಪ್ರತಿಬಂಧ

ವಾಷಿಂಗ್ಟನ್ ಫೆ 10— 11 ಜನಾಂಗಗಳ ದೂರಪ್ರಾಚ್ಯ ಕಮಿಷನ್ನಿನವರು ಜಪಾನಿನಲ್ಲಿ ಆಟಂ ಉಪಯೋಗ ಮತ್ತು ಪರಿಶೋಧನೆಯನ್ನು ಪ್ರತಿಬಂಧಿಸಿದ್ದಾರೆ.

ಕೋಮುವಾರು ಬಹಿಷ್ಕಾರ ತಪ್ಪು

ನಂದೀಗ್ರಾಮ ಫೆ 10— ಒಂದು ಕೋಮಿನವರು ಮತ್ತೊಂದು ಕೋಮಿನವರನ್ನು ಬಹಿಷ್ಕರಿಸುವುದು ತಪ್ಪೆಂದೂ ಇದರಿಂದ ಇಬ್ಬರಿಗೂ ಒಳ್ಳೆಯದಲ್ಲವೆಂದೂ ಮಹಾತ್ಮಾ ಗಾಂಧಿಯವರು ಹೇಳಿರುವರು.

ಪ್ರೊ || ಶಿ || ಮಾಧವರಾಯರಿಗೆ ಹೊಸ ಹುದ್ದೆ

ಸೇರೈಕೆಲಾ ಫೆ 10— ಮೈಸೂರು ಸಂಸ್ಥಾನದ ಮಾಜಿ ದಿವಾನರಾದ ಪ್ರಧಾನ ಶಿರೋಮಣಿ ಮಾಧವರಾಯರೂ ಮತ್ತು ಕೇಂದ್ರ ಸಭಾ ಸದಸ್ಯರಾದ ಶ್ರೀ ಕೆ. ಸಿ. ನಿಯೋಗಿಯವರೂ, ಪ್ರಾಚ್ಯ ಸಂಸ್ಥಾನಗಳ ಪೆಡರೇಷ್ಟ್ ಸ್ಥಾಪನೆಗೆ ಸಲಹೆಗಾರರಾಗಿರಲು ಒಪ್ಪಿದ್ದಾರೆ.

೯೦ ಲಕ್ಷ ರೂ.

ನವದೆಹಲಿ ಫೆ 10— ರಾಷ್ಟ್ರೀಯ ರಸಾಯನಾ ಮತ್ತು ಕೈಗಾರಿಕೆ ಪರಿಶೋಧನಾ ಸಂಸ್ಥೆಗಳ ಸ್ಥಾಪನೆಗಾಗಿ 90 ಲಕ್ಷ ರೂ. ಗಳನ್ನು ವ್ಯಯಮಾಡಲು ಈ ಸಂಬಂಧದ ಸಮಿತಿಯವರು ನಿರ್ಧರಿಸಿರುವರು.

ಜಪಾನಿನಿಂದ ಬ್ರಿಟಷ್ ಸೈನ್ಯ ವಾಪಸ್ಸು

ಟೋಕಿಯೋ ಫೆ 10— ಜಪಾನಿನಲ್ಲಿರುವ ಬ್ರಿಟಿಷ್ ಸೈನ್ಯದಲ್ಲಿ ಮೊದಲನೇ ತಂಡವು ಈ ತಿಂಗಳು 18 ಕ್ಕೆ ಅಲ್ಲಿಂದ ವಾಪಸ್ಸಾಗುವುದು.

ಟನ್ನಿಗೆ ಬ್ರಿಕಲ್ಲಿಜ್ಜಲು

ವಾಷಿಂಗ್ಟನ್ ಫೆ 10— ಬ್ರಿಟನ್ನು ತನ್ನ ಹಡಗುಗಳಿಗೆ ಅಮೇರಿಕಾ ಕಲ್ಲಿಜ್ಜಲನ್ನು ಕೊಳ್ಳಬಹುದೆಂದು ಹೇಳಲಾಗಿದೆ.

ಕಮ್ಯೂನಿಸ್ಟು ನಿರ್ಣಯ ತಿರಸ್ಕಾರ

ಮದರಾಸು ಫೆ 11— ಮದರಾಸು ಶಾಸನ ಸಭೆಯ ಕಮ್ಯುನಿಸ್ಟ್ ಸದಸ್ಯರಾದ ಶ್ರೀ ವೆಂಕಟೇಶ್ವರಲು ಅವರು ಮಂಡಿಸಿದ್ದ, ಸಾರ್ವಜನಿಕಾ ರಕ್ಷಣಾ ಕಾಯಿದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂಬ ನಿರ್ಣಯವನ್ನು ಪ್ರಧಾನಿ ಪ್ರಕಾಶಂ ತಿರಸ್ಕರಿಸಿದರು.

೧೯೭೦ ಮಿಲಿಯ ರೂ. ಪರಿಹಾರ

ಕೊಲಂಸೋ ಫೆ 7 — 1939 ರಿಂದ 1945 ರವರೆಗೆ ತಾವು ಕೊಂಡ ಸರಕುಗಳ ಸಂಬಂಧದಲ್ಲಿ ಹೆಚ್ಚು ಬೆಲೆ ಬಿದ್ದಿರುವುದಕ್ಕಾಗಿ ತಮಗೆ ೧೯೭೦ ಮಿಲಿಯಾ ರೂ. ಪರಿಹಾರ ಕೊಡಬೇಕೆಂದು ಸಿಲೋನ್ ಸರಕಾರವು ಬ್ರಿಟಿಷ್ ಸರಕಾರವನ್ನು ಕೇಳಿದೆ.

ಎಂಥಾ ಗಂಡ ಬೇಕು

ಜರ್ಮನಿಯ ಅಮೇರಿಕಾ ಆಕ್ರಮಿತ ಪ್ರದೇಶದಲಿ ಸರಿಶೀಲಿಸಲಾಗಿ ಶೇಕಡ ೮೫ ಮಂದಿ ಸ್ತ್ರೀಯು ಅಹಾರ ಸಂಬಂಧದ ವ್ಯಾಪಾರಿಗಳನ್ನು ವರಿಸಲು ಇಷ್ಟಪಡುತ್ತಾರೆ. ಕಟುಕರು ರೊಟ್ಟಿ ಅಂಗಡಿಯವರು ಕಿರಾಣಿ ವ್ಯಾಪಾರಿಗಳನ್ನು ಹೋಟಲಿನವರುಗಳನ್ನವರಿಸಲು ತವಕ ಪಡುತ್ತಾರೆ.

ಎಂಥಾ ನಿರ್ಬಂಧ

ಅಹಮದಾಬಾದಿನ ಪ್ರೇಮಚಂದ್ ಟ್ರೈನಿಂಗು ಕಾಲೇಜಿನ ಸನಾತನ ಧರ್ಮ ವಿದ್ಯಾರ್ಥಿಗಳು ತಮ್ಮ ಊಟದ ಮಂದಿಂದಲ್ಲಿ ಹರಿಜನರನ್ನು ಸೇರಿಸದಿರಲು ಅವರೆಲ್ಲಾ ಹಾಸ್ಟೆಲ್ ಬಿಡಬೇಕೆಂದು ಅಧಿಕಾರಿಗಳು ಆಜ್ಞೆ ಮಾಡಿದ್ದಾರೆ

ಶ್ವೇತ ಮಹಿಮೆ ತಗ್ಗಕೂಡದು

ಲಂಡನ್ ಫೆ 10 — ದಕ್ಷಿಣ ರೂಡೇಷಿಯಾದಲ್ಲಿ ಶ್ವೇತ ಮಹಿಮೆ ತಗ್ಗಲೇ ಕೂಡದು. ಅಲ್ಲಿ ಆಫ್ರಿಕೆಯವರಿಗೆ ಇರುವ ಪ್ರತಿಬಂಧಕಗಳನ್ನು ಇನ್ನು ಇಪ್ಪತ್ತು ವರ್ಷಗಳವರೆಗಾದರೂ ತೆಗೆಯುವುದಿಲ್ಲ. ಅಲ್ಲಿಯ ಪ್ರಧಾನಿ ಪ್ರಕಟಣೆ ಇದು.

ರಚನಾ ಸಮಿತಿಗೆ ಸಂಸ್ಥಾನ ಪ್ರತಿನಿಧಿಗಳು

ನವದೆಹಲಿ ಫೆ 10 — ರಾಜ್ಯಾಂಗ ರಚನಾ ಸಭೆಯು ಸಂಧಾನ ಸಮಿತಿಯು ಸದಸ್ಯ ಡಾ|| ಪಟ್ಟಾಭಿಸೀತಾರಾಮಯ್ಯನವರೇಂದ್ರ ಸಂಧಾನ ಸಮಿತಿಯೊಡನೆ ಇನ್ನೂ ಯಾವ ರಾಜಕೀಯ ಚರ್ಚೆಯೂ ಜರುಗಿಲ್ಲ ಎಂದಿದ್ದಾರೆ.

ಗೌ। ಆಯುರ್ವೇದಿಕ್ ಮತ್ತು ಯುನಾನಿ ಕಾಲೇಜು ವಿದ್ಯಾರ್ಥಿಗಳ ಮುಷ್ಕರ

ಗೌ || ಆಯುರ್ವೇದಿಕ್ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಕುಂದುಕೊರತೆಗಳನ್ನು ಕಾಲೇಜಿನ ಅಧಿಕ್ಷಾರಿಗಳಿಗೆ ಆರು ತಿಂಗಳ ಹಿಂದೆಯೇ ತಿಳಿಸಿದ್ದರೂ ಅವರು ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಕಾಲೇಜಿನ ಸ್ಥಿತಿಯು ಕೆನೇದಿನೇ ಕೆಡುತ್ತಿದೆ. ಆದ್ದರಿಂದ ಇಂದಿನಿಂದ ಮುಷ್ಕರ ಹೂಡಿದ್ದೇವೆ. ನಮ್ಮ ಬೇಡಿಕೆಗಳು ಪೂರ್ಣವಾಗುವವರೆಗೂ ನಾವು ಕಾಲೇಜಿಗೆ ಹಿಂದಿರುಗುವುದಿಲ್ಲವೆಂದು ತೀರ್ಮಾನಿಸಿದ್ದಾರೆ.

ಬ್ರಿಟಿಷ್ ಸಲಹೆ ನಿರಾಕರಿಸಲ್ಪಟ್ಟಿತು

ಲಂಡನ್ ಫೆ 10 — ಪ್ಯಾಲಿಸ್ಟೈನ್ ಸಂಧಾನದ ಬಗ್ಗೆ ಬ್ರಿಟಿಷರು ಮುಂದಿಟ್ಟ ಸಲಹೆಗಳನ್ನು ಅರಬ್ ಮತ್ತು ಯಹೂದ್ಯರು ನಿರಾಕರಿಸಿದ್ದಾರೆ.

ಸುಹ್ರವರ್ದಿ ಮಂತ್ರಿಮಂಡಲ ಖಂಡನೆ

ನವದೆಹಲಿ ಫೆ 10— ಬೀಹಾರು ಮುಂತಾದ ಪ್ರಾಂತ್ಯಗಳಿಂದ ಬಂಗಾಳಾಕ್ಕೆ ಸುಹ್ರವರ್ದಿ ಮಂತ್ರಿ ಮಂಡಲ ಮುಸ್ಲಿಂರನ್ನು ಕರೆಸುತ್ತಿದೆ, ಇದಕ್ಕಾಗಿ ಅಸಾಧ್ಯ ಧನನಾಶವಾಗುತ್ತಿದೆ ಸಾಕಿ ಸ್ಥಾನ ರಚನೆಗಾಗಿ ಹಣ ವೆಚ್ಚವಾಗುತ್ತಿದೆ '' ಎಂದು ಹಿಂದೂ ಮಹಾಸಭೆ ಖಂಡಿಸಿ ನಿರ್ಣಯವನ್ನಂಗೀಕರಿಸಿದೆ.

ಬ್ರಿಟಿಷ್ ಸ್ವಾರ್ಥ ಸಾಧನೆ

ಕಾಂಗ್ರೆಸ್–ಲೀಗ್ ವೈಷಮ್ಯದಲ್ಲಿ ಬ್ರಿಟಿಷರು ಸ್ವಾರ್ಥವನ್ನು ಸಾಧಿಸುತ್ತಿರುವುದಾಗಿ ಲಂಡನ್ ಪತ್ರಿಕೆಗಳು ಪ್ರಕಟಿಸಿವೆ.

ಅಮೇರಿಕಾದ ನಿಯಮಗಳು

ನ್ಯೂಹೆಂಪ್ಶೈರಿನಲ್ಲಿ ಟಾ ಫಿಕ್ ವಿಚಿತ್ರವಿದು. ಒಂದು ಚೌಕದಲ್ಲಿ ಬೇರೆ ಬೇರೆ ಕಡೆಯಿಂದ ಎರಡು ವಾಹನಗಳು ಸೇರಿದರೆ ಅವೆರಡೂ ನಿಲ್ಲಿಸಲ್ಪಡಬೇಕು ಅಲ್ಲದೆ ಒಂದು ಹೊರಡದೆ ಇನ್ನೊಂದು ಹೊರಡಕೂಡದು. ಎರಡೂ ಒಟ್ಟಿಗೇ ಹೊರಡಬೇಕು.

ಇಂಡಿಯಾನಾದ ಗೇರಿ ಎಂಬಲ್ಲಿ ಜನರು ಬೆಳ್ಳಂಬೆಳ್ಳಿತಿಂದ ೪ ಗಂಟೆಗಳೊಳಗೇ ಟ್ರಾಫಿನಲ್ಲಿ ಸಂಚಾರಿಸಕೂಡದು.

ಮಿಚಿಗಾನಿನ ಸಾಲ್ಟ್ ಸೇಂಟ್ ಮೇರಿಯಾದಲ್ಲಿ ಗಾಳಿಯು ಎದುರಾಗಿ ಉಗುಳುವುದು ದುರ್ಘಡತೆ !

ಕ್ಯಾಲಿಫೋರ್ನಿಯಾದಲ್ಲಿ ನಿಮಗೆ ಶಿಕಾರಿ ರಹದಾರಿ ಇಲ್ಲದ ಬೋನಿನಲ್ಲಿ ಇಲಿಯನ್ನು ಹಿಡಿಯಕೂಡದು.

ಮಿಚಿಗಾನಿನಲ್ಲಿ ಹೆಂಡತಿಯ ಉಡುಗೆ ತೊಡಿಗೆಯಲ್ಲಾ ಗಂಡನಿಗೆ ಸೇರಿದ್ದು ಆವಳು ಇವನನ್ನು ತ್ಯಜಿಸಿದರೆ ಅವೆಲ್ಲವನ್ನು ಆವಳ ಮೈ ಮೇಲಿಂದ ಇವನು ತೆಗೆದು ಕೊಳ್ಳಬಹುದು.

ಇಲ್ಲಿ ನಾಯಿಸ್ಸಿನಲ್ಲಿ ಒಬ್ಬ ಹೆಂಗಸು ಒಂದು ಅಂಗಡಿಯಲ್ಲಿ 6 ಕ್ಕಿಂತ ಹೆಚ್ಚು ಉಡುಗೆಯನ್ನು ಧರಿಸಿ ಸೋಡಿದರೆ ಚಾರಣೆಗೆ ಒಳಪಡಿಸಬಹುದು.

ಜರ್ಮಕ್ ಖೈದಿಗಳ ಡಿಪೆನ್ಸ್ ಲಾಯರುಗಳು ತಮಗೆ ಹೊಟ್ಟೆ ತುಂಬ ಆಹಾರ ಕೊಡದಿದ್ದರೆ ಮುಷ್ಕರ ಹೂಡುವುದಾಗಿ ತಿಳಿಸಿರುವರು. ಅವರು ಈಗ ಕೊಡುತ್ತಿರುವುದು ಸಾಲದಂ !

ಅಮೇರಿಕಾದ ಚಾಟ್ ನೂಗುಲ್ಲಿ ವಿಲ್ಡ್ರೆಡ್ ಗಿಲ್ಸ್ ಎಂಬಾಕೆಯು ತನ್ನ 16 ನೇ ವಿವಾಹ ವಿಚ್ಛೇದನೆಯನ್ನು ಪಡೆದಳು. ಇನ್ನು 17 ನೇ ಗಂಡನನ್ನು ವರಿಸಬಹುದು.

— —

ರಷ್ಯಾದ ಪ್ರಥಮ ವರ್ತಮಾನ ಪತ್ರಿಕೆಯು ಏಳಳ ವರ್ಷಗಳ ಹಿಂದೆ ಪ್ರಕಟವಾಯಿತು.

ಮಾಸ್ಕೋ ಫೆ 10 — ರಷ್ಯಾ ಮಹಾ ಚುನಾವಣೆ ಮುಗಿಯಿತು. ಶೇ 98 ಮಂದಿ ಓಟು ಕೊಟ್ಟಿದ್ದಾರೆ. ಪ್ರಥಮ ಫಲಿತಾಂಶ ನಾಳೆ.

ಸಮಾನ

ಬಯಿ ಪಾಯಧುಣಿ ಭಾಗದ ಂಭವಿಸಿದ ಚೂರಿ ಇರಿತದಲ್ಲಿ ಒಳ್ಳೆ ಧೈರ್ಯದಿಂದ ಮತ್ತು ಕರ್ತವ್ಯ ಪ್ರೀತಿ ತೆಯಿಂದ ಇರಿಯುವವನನ್ನು ಪೋಲೀಸ್ ಕಾನ್‌ಸ್ಟೇಬಲ್ ನಾರಾಯಣ ಬಾಳ ಶಿವಡೆ ಎಂಬವನು ಬಂಧಿಸಿದ್ದರಿಂದ ಅವನಿಗೆ ನಾಯಕನ ಸ್ಥಾನ ಕೊಟ್ಟು ರೂ. 150 ಬಹುಮಾನ ಕೊಡಲಾಯಿತು.

ಉಪವಾಸ

ಸಂಸ್ಥಾನಾಧಿಕಾರಿಗಳು ಗೂಲ್ಹಾಪುರ ಸರ್ಕಾರಿ ನೌಕರರ ಬೇಡಿಕೆಗಳಿಗೆ ಒಪ್ಪಿಕೊಂಡ ಪ್ರಕಾರ ಅವನ್ನು ಪೂರೈಸದಿದ್ದರೆ ತಾವು ಉಪವಾಸ ಕೈಗೊಳ್ಳುವದಾಗಿ ಪ್ರಜಾ ಪರಿಷತ್ತಿನ ಅಧ್ಯಕ್ಷರಾದ ಮಾಧವ ಬಾಗಲರವರು ಸರ್ಕಾರಕ್ಕೆ ತಿಳಿಸಿದ್ದಾರೆ.

ಮೈಸೂರು ಪೌರಸಭೆ

ಮೈಸೂರು — ಪೌರಸಭೆಯು ವಿಶೇಷ ಅಧಿವೇಶನ ನಾಳೆಯ ದಿವಸ ಮಧ್ಯಾಹ್ನ ನಾಲ್ಕು ಗಂಟೆಗೆ ಸೇರುವುದು.

ಶ್ರೀ ಟಿ. ಮರಿಯಪ್ಪ, ಶ್ರೀ ಪಿ. ಗೋಪಾಲಕೃಷ್ಣಶೆಟ್ಟಿ ಮತ್ತಿತರರು ಹತ್ತು ಮಂದಿ ರುಜು ಮಾಡಿ ಕಳುಹಿಸಿರುವ ವಿಷಯವನ್ನು ಪರಿಶೀಲಿಸಲಾಗುವುದು.

ಮೈಸೂರು ಪೌರಸಭೆಗೆ ಜುನಾಯಿತ ಅಧ್ಯಕ್ಷರು ಇರಬೇಕೆಂದು ಕಲಿದ 37 ನೇ ಸಾಲಿನಿಂದ 46 ನೇ ಸಾಲಿನವರೆಗೆ 11 ನಿರ್ಣಯಗಳು ಅಂಗೀಕಾರವಾಗಿವೆ ಸರ್ಕಾರ ನಮ್ಮ ಆಶಯವನ್ನು ಈಡೇರಿಸಿಲ್ಲ ಅಧ್ಯಕ್ಷ ಜುನಾವಣಾ ಹಕ್ಕನ್ನು ದಯಪಾಲಿಸಬೇಕೆಂದು ಶ್ರೀಮನ್ಮಹಾರಾಜರಿಗೆ ಮನವಿ ಸಲ್ಲಿಸಲು ಮತ್ತು ಅದರ ಬಗ್ಗೆ ಕಾರ್ಯಕ್ರಮ ಕೈಗೊಳ್ಳಲು ಉಪಾಧ್ಯಕ್ಷರು ಮತ್ತು ಆರು ಜನ ಸದಸ್ಯರನ್ನೊಳಗೊಂಡ ಸಮಿತಿಯಾಗಬೇಕೆಂಬುದೇ ವಿಷಯ ಹೆಸರು ಸೂಚಿಸಲ್ಪಟ್ಟಿದೆ

ವೈಟೋಫೆರಿನ್

—೦—

ಎಸೆತ್ತು ಡಿ ಎಂಬ ಶರೀರ ಪೋಷಕ ವೈಟಮಿನ್‌ಗಳಿಂದಲೂ, ಐರ್ಷ್ಟಿಯಂ ಮತ್ತು ವೊಟಾಸಿಯಂ ಎಂಬ ಲೋಹ ವಿಶೇಷಗಳಿಂದಲೂ ಕೂಡಿ, ಜೀನುತುಪ್ಪ ಮತ್ತು ಮಾಲ್ಟ್ ಸಾರಗಳಿಂದ ಬೆರೆತ ಉತ್ತಮ ವರ್ಗದ ಟಾನೀಕು.

ವೈಟ್ಟಗಳ ಅಭಾವತೆಯಿಂದೊದಗುವ ಎಲ್ಲ ಅಸ್ವಸ್ಥತೆಗೂ, ರಕ್ತಹೀನತೆ ದೌರ್ಬಲ್ಯ ಮೊದಲಾದ ದೇಹಾಲಸ್ಯಕ್ಕೂ ಕೊಡಲು ಯೋಗ್ಯವಾದದ್ದು.

——೦——

— ಮೈಸೂರಿನಲ್ಲಿ ತಯಾರಾದುದು —

ಮೈಸೂರು ಇಂಡಸ್ಟ್ರಿಯಲ್' ಅಂಡ್ ಟೆಸ್ಟಿಂಗ್'

ಲ್ಯಾಬೋರೇಟರಿ ಲಿಮಿಟೆಡ್

ಮಲ್ಲೇಶ್ವರಂ ಪೋಸ್ಟು .... ಬೆಂಗಳೂರು

At Opera ⁼ 2nd Glorious Week

THE SECRET CODE

Next Change ⁼ Stagedoor Canteen

Morning Shows from 14—2—47 — JADE MASK

Edited, Printed and Published by M. S Krishna Rao at the Satyavadi Press ChamarajAgra-har, Mysore.

At Ranjit—— 2nd Houseful Week

SHAHJEHAN

ಸೈಗಾಲ್, ಜೈರಾಜ್, ರಾಗಿನಿ, ನಸೀಂ ಪಾತ್ರವಹಿಸಿರುವ

ಷಹಜಹಾನ್

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಫಂದ ಅಡಿಕೆವುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಪಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಸೈಟುಗಳ ಹರಾಜು

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—

ಮೈಸೂರು ಸಿಟಿ ವಾಣೀವಿಲಾಸ ಮೊಹಲ್ಲಾದಲ್ಲಿ ಗೋಕುಲಂ ರೋಡಿನ ಪಶ್ಚಿಮ ದಿಕ್ಕಿನಲ್ಲಿರುವ ಕಾಟೇಜ್ ಮತ್ತು ಬಂಗ್ಲೋ ಸೈಟುಗಳನ್ನು ತಾ || 12-1-47 ನೇ ಮಕ್ರುಂ ಹರಾಜು ಇಸ್ತಿಹಾರ್ ನಾಮೆಯ ಪರತ್ತುಗಳಿಗೆ ವಳಪಡಿಸಿ ತಾ || 16-2-1947 ನೇ ಭಾನುವಾರ ಬೆಳಿಗ್ಗೆ 9-30 ಘಂಟೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ.

ಇತರ ವಿವರಗಳನ್ನು ಆಫೀಸಿನಲ್ಲಿ ರಜಾದಿನಗಳಲ್ಲದ ಇತರ ದಿವಸಗಳಲ್ಲಿ 11 ಘಂಟೆಯಿಂದ 5 ಘಂಟೆಯವರೆಗೆ ತಿಳಿಯಬಹುದು.

(Sd) K. Venkatesha Iyer
For Chairman
City Improvement Trust Board, Mysore

ದ ವಾರವೇ ಎಲ್ಲಾ
ಮಿತ್ರರೊಂದಿಗೆ ಸುಖ
ಗವುಂಟು.

ಕಟಕ — ಧೈರ್ಯಂ ಸರ್ವತ್ರ
ಧನಂ ಎಂಬುದನ್ನು ಮರೆಯದೆ ವ
ದಲ್ಲಿ ಸುಖವಾಗಿ ಈ ವಾರವು ಪರಿ
ಸುತ್ತದೆ.

ಸಿಂಹ — ಇತರರ ಮಾತಿ
ಗೊಡಬೇಡಿ, ಯಾರಿಂದಲೂ ಸಹಾ
ವಾಗದು. ವಿಶಾಲ ಭಾವದೊಡನೆ ವ
ರ್ತಿಸಿರಿ.

ಕನ್ಯಾ — ಮಾನಸಿಕ ಶಾಂತಿ ಇರು
ತ್ತದೆ ಗೃಹ ವಿಷಯಗಳು ಅನುಕೂ
ಲವಾಗಿರುತ್ತವೆ ಆರೋಗ್ಯವು ಚ
ನ್ನಾಗಿರುತ್ತದೆ. ಬಂಧುಗಳ ಆಗಮನ
ದ ನಿರೀಕ್ಷೆಯೂ ಕಾಣ ಬರುತ್ತದೆ. ಉ
ತ್ಸಾಹವುಂಟು.

ತುಲ — ಖರ್ಚು ಹೆಚ್ಚು ಎಲ್ಲಾ
ವಿಷಯಗಳಲ್ಲಿಯೂ ಸಾಮಾನ್ಯ ಫಲ.
ಸಾಲ ಮಾತ್ರ ಮಾಡಬೇಡಿ ಜೋಕೆ.

ವೃಶ್ಚಿಕ — ಪ್ರಯತ್ನಶೀಲರಾಗಿರಿ,
ಯಾರನ್ನೂ ನಂಬಬೇಡಿ ಸಂಬಿದಲ್ಲಿ ಕೆ
ಡುವಿರಿ. ಸಾಧುಶ್ರೇಷ್ಠರ ದರ್ಶನ
ಲಾಭ ವಿರುವಂತಿದೆ.

ಧನಸ್ಸು — ಧನಾಗಮನ ಯೋಗ
ವಿದೆ. ಕೈಗೊಂಡ ಕಾರ್ಯಗಳು ಈ
ದೇರುತ್ತವೆ ದೇವರ ಸಹಾಯವಿದೆ
ನಂಬಿ.

ಮಕರ — ಕೀರ್ತಿಯು ಹೆಚ್ಚುತ್ತ
ದೆ. ಆರೋಗ್ಯವಿರುತ್ತದೆ.

ಕುಂಭ — ಅನುಕೂಲವಾದ ವಾರ
ವಲ್ಲ. ಧನ ನಷ್ಟವಾಗಬಹುದು. ಆ
ದರೈರ್ಯವನ್ನು ಬಿಡಬೇಡಿ.

ಮೀನ — ಕಾರ್ಯೋತ್ಸುಕರಾ
ಗಿದ್ದಲ್ಲಿ ತಾಪತ್ರಯಗಳೆಲ್ಲವೂ ಮಾಯ
ವಾಗುತ್ತವೆ. ಹೆಚ್ಚಿನ ಲಾಭ ಬರುವ
ದೆಂಬ ಆಶಯವನ್ನು ಹುಟ್ಟಿಸುವ ಕಾ
ರ್ಯಗಳಿಗೆ ಕೈ ಹಾಕಬೇಡಿ.

ಪ್ರದಕ್ಷಿ
ಕಾ ತಿಂಗಳಿನ ಹೆಚ್ಚಾದ ೧೦
ೀಟಿ ಟಿ ಆಲೂಗೆಡ್ಡೆ ನಾಶಪಡಿಸ
ೀಕಾಗಿದೆಯಂತೆ.

ಈಜಿಪ್ಟರಿಗೆ ಕೊಟ್ಟರು

ಆಲೆಗ್ಜಾಂಡ್ರಿಯಾ ಫೆ 8 — 1882
ರಲ್ಲಿ ಬ್ರಿಟಿಷ್ ಸೈನ್ಯ ಆಕ್ರಮಿಸಿಕೊಂಡಿ
ದ್ದ ಮುಸ್ತಫಾ ಫಾಷಾ ಸೈನ್ಯ ಶಿಬಿರ
ಗಳನ್ನು ಈಜಿಪ್ಷಿನವರಿಗೆ ವಹಿಸಿಬಿಟ್ಟದ್ದ
ರಿಂದ ಈಜಿಪ್ಟರಿಗೆ ಅಪರಿಮಿತ ಸಂತೋ
ಷವುಂಟಾಗಿದೆ

ಭಾರತದ ಬಗ್ಗೆ ಬ್ರಿಟಿಷ್ ಸರಕಾರ ದ ಹೇಳಿಕೆ

ನವದೆಹಲಿ ಫೆ 8 — ಭಾರತದ ಬ
ಗ್ಗೆ ಬ್ರಿಟಿಷ್ ಸರಕಾರದ ಹೇಳಿಕೆ ಪಾ
ರ್ಲಿಮೆಂಟಿನಲ್ಲಿ ಮುಂದಿನವಾರ ಹೇಳಲ್ಪ
ಡುವದೆಂದು ನಿರೀಕ್ಷಿಸಲಾಗಿದೆ

ನೋಟು ಅಪಹಾರ

ಯುಮೆಕನಮರ್ಡಿಯ ಒಬ್ಬ ಮನು
ಷ್ಯನು ಗೊಡಚಿನಮಲ್ಕಿಯಲ್ಲಿಯ ಒಬ್ಬ
ಗೃಹಸ್ಥನಿಗೆ ನೂರು ರೂಪಾಯಿಯ
ಒಂದು ನೋಟಿಗೆ ೨ ನೋಟು ಮಾಡಿ
ಕೊಡುತ್ತೇನೆಂದು ಹೇಳಿ ಮೋಸ ಮಾ
ಡಿ ೨೫೦೦ ರೂಪಾಯ ಅಪಹರಿಸಿಕೊಂ
ಡು ಹೋಗಿರುವನು

ಸರ್ ಬೋವಿಸ್
ಶಾಸ್ತ್ರಜ್ಞನು.
ಅಳತೆ ಮಾಡಿದರು.

ಅತಿ ಹೆಚ್ಚು ಹಟ. ಸರ್. ಸಿ. ಪಿ.
ಪ್ರಥಮ ಶ್ರೇಣಿಯ ಮೊದಲು. ಪ್ರಪಂಚವಲ್ಲಿ
ಒಂದೊಂದಿದೆ ಹೋಲಿಸಬಲ್ಲದ್ದು.

ಭೋಪಾಲ್ ನವಾಬರು — ಮೊದಲನೆ ದರ್ಜೆಯ ಮೊದಲು. ನಿರ್ಮಾ
ಣ ಪೂರ್ವಕವಾದ ಅನೇಕ ಭಾವಗಳುಳ್ಳದ್ದು.

ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ್ - ಅತ್ಯಂತ ಉತ್ತಮವಾದ
ಮೊದಲು. ಸರ್ ಮಹಮ್ಮದ್ ಜಫರುಲ್ಲಾ ಖಾ — ಹಳ್ಳಿ ಮೊದಲು. ಹೆಚ್ಚು
ಹಟ. ಸರ್ ಪದ್ಮಪತ್ ಸಿಂಘಾನಿಯಾ — ವರ್ತಕ ವ್ಯಾಪಾರದಲ್ಲಿ ಮೊದಲನೆ
ಯ ದರ್ಜೆಯ ಮೊದಲು

ಫರೀದ್ ಕೋಟೆ ರಾಜರವರು — ಸರ್ ಮಹಮ್ಮದ್ ಜಫರುಲ್ಲಾಖಾನಿನವ
ರಂತೆಯೇ.

ತಮ್ಮ ಮೊದಲನ್ನು ಅಳತೆ ಮಾಡಲು ಮೇಲಿನವರು ಏಕೆ ಒಪ್ಪಿಕೊಂಡ
ರೋ ? (ತ್ರಿ)

8—2—47 ರಿಂದ ಯಶಸ್ವಿ 2 ನೇ ವಾರ

ಚಾಮುಂಡೇಶ್ವರಿಯಲ್ಲಿ
ಪ್ರತಿ ದಿನ 3 ಆಟಗಳು
ಸೊಹ್ರಾಬ್ ಮೋಡಿಯವರ
ಅಮೋಘ ಸಂಗೀತ ಚಾರಿತ್ರಿಕ ಕಲಾಕೃತಿ

ಏಕ್ ದಿನ್ ಕ ಸುಲ್ತಾನ್

(Ek-Din-Ka-Sultan)

(The Picture that has captivated
the hearts of the Mysore Public)

ಭೂಮಿಕೆ — ಮೆಹ್ತಾಬ್, ವಾಸ್ತಿ,
ಸಾದಿಕ್ ಆಲಿ, ಮತ್ತು ಗುಲಾಂ ಮಹಮದ್

— An OSWAL FILMS (Bangalore) Release —

[ಶುಭ]

ಚಿತ್ರಕೂಟದ ಗೂರಲು ನಿವಾರಣಾ ಬೂತಿ

ಲೋಕಪ್ರಸಿದ್ಧವಾದ ಖಾತ್ರಿ ಗುಣ
ಪಡಿಸುವ ಬಹು ಶಕ್ತಿಯುತವಾದ ಚಿತ್ರ
ಕೂಟ ಗೂರಲು ನಿವಾರಣಾ ಬೂತಿಯ
ನ್ನು ಒಂದು ಹೊತ್ತು ಸೇವಿಸುವುದರಿಂದ
ಕೂರಲು ರೋಗವು ಸಂಪೂರ್ಣವಾಗಿ
ನಿವಾರಣೆಯಾಗುವುದು. 7—3—47 ಪೂ
ರ್ಣಿಮಿ ದಿವಸ ಸೇವಿಸಬೇಕು.

ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾ
ಡಿರಿ. ಅಡ್ರೆಸ್ ಸ್ಪಷ್ಟವಾಗಿರಲಿ.

Manager, Mahatma Naga Baba
Ayurvedashram
P. O. Chitrakot (U. P.)

ಇಂಡಿಯಾ ದೇಶದಲ್ಲಿ ತಯಾರಾ
ಗುವಷ್ಟು ಅರಗು ಮತ್ತೆಲ್ಲಿಯೂ ತಯಾ
ರಾಗುವದಿಲ್ಲ. ವರ್ಷಂ ಪ್ರತಿ ತಯಾ
ರೂ ೪೦—೫೦ ಸಾವಿರ ಟನ್ನುಗಳು.

ಸ್ಟುಟ್‌ಗಾರ್ಟ್ ಫೆ 8 — ಜರ್ಮನ್
ನ್ಯಾಷನಲ್ ಸೋಷಿಯಲಿಜಂ ಮತ್ತೆ
ಚಿಗುರುತ್ತಿರುವುದು ಅನೇಕರಿಂದಲ್ಲಿ ಕಳ
ವಳವಂಟು ಮಾಡಿದೆ.

ಸಾಸ್ಕೊ ಒ
ವು ಮಹಾಕಾರ್ಯವೆಂದು ಸಂಭೋಧಿ
ಅದನ್ನು ರಷ್ಯಾ ಭಾಷೆಗೆ ಪರಿವರ್ತಿಸ
ಲಾಗುತ್ತಿದೆಯೆಂದು ಮಾಸ್ಕೋ ರೇಡಿ
ಯೋ ತಿಳಿಸಿದೆ.

ಆರಿಷಡ್ವರ್ಗಗಳು

ಬೇಟೆಯಾ ನಾಯಿಗಳು
ಹೊಂಚುಹಾಕುತಿವೆ
ಮೊಲವ ಮುತ್ತುವ ಪರಿಯ
ಲೆನ್ನ ಮುತ್ತುತಿವೆ
ಹಾರಿ ಹೋಗಲು ದಾರಿ
ಯಿಲ್ಲದಂತಾಗಿ
ಕಳವಳಕೆ ಸಿಲುಕಿಹೆನು
ಬರಿಯ ಮೂಕಾಗಿ
ಆರುವಿಧ ಶತ್ರುಗಳ
ನಾರು ಗೆಲ್ಲುವರು ?
ಆರಾದರೇನಂತೆ
ಸಿಲುಕಿ ನೆರಳುವರು
ಎಲ್ಲಕ್ಕೂ ಮೊದಲಲ್ಲಿ
ಕಾಮುಗದರಿಸಲು
ಕ್ರೋಧ ತಾ ಬಳಿಯಲ್ಲಿ
ಕಾದು ನಿಂತಿರಲು
ಲೋಭ ಮೋಹಗಳಾಗ
ಬಂದು ಕಾಡುವುವು
ಪುದವು ಮತ್ಸರ ಬಂದು
ಬಿಡದೆ ಕೊಲ್ಲುವುವು
[ವೈ. ಪ.]

—o—

ಮದರಾಸು ಫೆ 4 —ಜಮೀರ್ದಾರಿ ಪದ್ಧತಿ ವಜಾ ಮಾಡಬೇಕೆಂಬ ಮಸೂದೆಯು ಶಾಸನ ಸಭೆಯಲ್ಲಿ ಮಂಜೂರಾಯಿತು.

ವಾಷಿಂಗ್ಟನ್ ಫೆ 2 — ಮಾರ್ಚಿಯಲ್ಲಿ ಭಾರತಕ್ಕೆ 78 ಸಾವಿರ ಟನ್ ಧಾನ್ಯ ರಫ್ತು ಮಾಡಲು ವ್ಯವಸಾಯ ಇಲಾಖೆಯು ನಿಗದಿ ಮಾಡಿದೆ.

ಜೋಹನ್ಸಬರ್ಗ್ ಫೆ 3 — ಒಬ್ಬ ಆಫ್ರಿಕಾ ಸ್ತ್ರೀ ಹೆಣ್ಣು ಅವಳಿ ಜವಳಿ ಮಕ್ಕಳನ್ನು ಹೆತ್ತಿರುವಳು. ಅವಕ್ಕೆ ಒಂದೇ ಎದೆ, ಆದರೆ ೨ ಹೃದಯಗಳಿವೆ

ಕರಾಚಿ ಫೆ 1 — ಭಾರತದಲ್ಲಿ ಇನ್ನೂ ಅನೇಕ ವರ್ಷಗಳು ರೇಷನಿಂಗು ಜಾರಿಯಲ್ಲಿರಬೇಕೆಂದು ಭಾರತ ಸರಕಾರದ ಆಹಾರ ಸಲಹೆಗಾರ ವಿ|| ಕಿರ್ಬಿಯವರು ಆಭಿಪ್ರಾಯ ಪಟ್ಟಿರುವರು.

ದ್ದಕ್ಕೆ
4 ಚ
ಅವ
ದಲ್ಲಿ !

ಹಾಂಬರ್ಗ್ ಫೆ
ವಿಮಾನ ಕೊಡೆ ಸ್ತ್ರೀಯ್ಸ್
ಗಿಯೂ ಮತ್ತು ಗ್ಯಾಸ
5000 ಮಂದಿ ಸ್ತ್ರೀಯರ
ಯೂ ವಿಚಾರಣೆಗೊಳಪಡಿಸಲಾಗಿದ್ದು
11 ನಾಜೀ ಸ್ತ್ರೀಯರಿಗೆ ಮರಣದಂಡ
ನೆ ವಿಧಿಸಲಾಗಿದೆ.

ನಾಜೀ ಚಳುವಳಿ

ಲಂಡನ್ ಫೆ 4 — ಜರ್ಮನಿಯಲ್ಲಿ ಇನ್ನೂ ನಾಜೀ ಗುಪ್ತ ಚಳುವಳಿ ನಡೆಯುತ್ತಿರುವದೆಂದು ಈ ಬಗ್ಗೆ ಪರಿಶೀಲಿಸಲು ನೇಮಿಸಲಾಗಿದ್ದ ಸಮಿತಿ ಅಭಿಪ್ರಾಯಪಟ್ಟಿರುವುದಾಗಿ ಹೇಳಲಾಗಿದೆ.

ಶ್ರೀ ತ್ಯಾಗರಾಜರ ಮಹಿಮೆ

ಒಂದು ಬಾರಿ ಪುದುಕೋಟೆ ಮಹಾರಾಜರು ತನ್ನ ಆಸ್ಥಾನದಲ್ಲಿ ಒಂದು ದೀಪ ಸ್ತಂಭವನ್ನು ಬತ್ತಿ ಮತ್ತು ಎಣ್ಣೆಗಳೊಂದಿಗೆ ಇರಿಸಿ ಸಂಗೀತ ವಿದ್ವಾಂಸರು ಯಾರಾದರೂ ತಮ್ಮ ಗಾನದಿಂದ ಆ ದೀಪವನ್ನು ಹತ್ತಿಸಬಲ್ಲರೇ ಎಂಬ ಪ್ರಶ್ನೆಯನ್ನು ದೇಶದೇಶಾಂತರಗಳಿಗೆ ಕಳುಹಿಸಲು ಶ್ರೀ ತ್ಯಾಗಯ್ಯನವರು ತಮ್ಮ ಗುರುಗಳೊಂದಿಗೆ ಆ ಸ್ಥಾನಕ್ಕೆ ಹೋಗಿ ಜ್ಯೋತಿಸ್ವರೂಪಿ ಥೇಗವರಾನ್ನು ಹಾಡಿ ದೀಪವು ಹತ್ತಿಕೊಳ್ಳುವಂತೆ ಮಾಡಿದರು. ದಿನಂಪ್ರತಿ ಒಂದು ಲಕ್ಷ ಇಪ್ಪತ್ತೈದು ಸಾವಿರ ಹಾಮಜಪವನ್ನು ಮಾಡುತ್ತಿದ್ದವರು ಅವರು. 24 ಸಾವಿರ ಕೃತಿಕಗಳನ್ನು ರಚಿಸಿರುವರು. ಇಂಥಾ ಮಹಾನುಭಾವರು ಇವರು. ನಿಜವಾಗಿಯೂ ಅವತಾರ ಪುರುಷರೇ ಹೌದು. ಓಂ.

ಮುನಿಸಿಪಲ್ ಕೌನ್ಸಿಲರುಗಳು ಗುಡಿಸಿದರು

ಹುಬ್ಬಳ್ಳಿ ಫೆ 4 — ಕಳೆದ ಭಾನುವಾರದಿಂದ ಇಲ್ಲಿಯ ಜಾಡಮಾಲಿಗಳು ಮುಷ್ಕರ ಹಿಡಿದಿರುವರು. ರಸ್ತೆ ಮತ್ತು ಚರಂಡಿಗಳಲ್ಲಿ ತುಂಬಿರುವ ಕಚರವನ್ನು ಮುನಿಸಿಪಲ್ ಕೌನ್ಸಿಲರುಗಳೂ ಮತ್ತು ಮುನಿಸಿಪಲ್ ಆಫೀಸ್ ನೌಕರರೂ ಗುಡಿಸಿದರು.

ಸ್ಥಾ
ವಿದ್ಯಾಸಿಲಿಯಾ ... ಆ
ಶೀರ್ವಾದ ದೊರೆತಿದೆ. ಆಳ್ವಾರು ಮಹಾರಾಜರು 10 ಲಕ್ಷ ರೂ. ಕೊಟ್ಟರು ವುದಲ್ಲದೆ ವರ್ಷಾಶನ ರೂ. 50 ಸಾವಿರ ಕೊಡುವುದಾಗಿ ತಿಳಿಸಿದ್ದಾರೆ.

o o

ಡೆಲ್ಲಿ ರಾಜ್ಯಾಂಗ ಸಭೆಗೆ 1946-47 ರ ಮತ್ತು ಮಾರ್ಚಿ 1948 ರ ವರೆಗೆ 65 ಲಕ್ಷ ರೂ ಖರ್ಚು ಆಂದಾಜಾಗಿದೆ.

o o

ನಾಗರೀಕರಿಗೆ ಬಟ್ಟೆ ಮತ್ತು ಸಾದಿಯನ್ನು ಒದಗಿಸಲು ಅಸಮರ್ಥವಾಗಿರುವದರಿಂದ ರೇಷನ್ ಶಾಖೆಯನ್ನು ಬಂದು ಮಾಡಬೇಕೆಂದು ಡಿಲ್ಲೀ ನಾಗರೀಕರು ಗಾಂಧೀ ಚೌಕದಲ್ಲಿ ಸಭೆ ಸೇರಿ ನಿರ್ಣಯ ಮಾಡಿದರು.

o o

ಡರ್ಬಾನ್ ಫೆ 1 — ಮಣಿಲಾಲ್ ಗಾಂಧಿಯವರ ಸಂಪಾದ ಕತ್ವದಲ್ಲಿ ಪ್ರಟವಾಗುತ್ತಿರುವ ಇಂಡಿಯನ್ ಒಪಿನಿಯನ್ ಪತ್ರಿಕೆಯಲ್ಲಿ ಬ್ರಿಟಿಷ್‌ರಾಜರು ಡರ್ಬಾನ್ ನಗರಕ್ಕೆ ಭೇಟಿ ಕೊಡುವ ದಿವಸವನ್ನು 'ಶೋಕ ದಿನವನ್ನಾಗಿ ಆಚರಿಸಬೇಕೆಂದೂ ಪ್ರದರ್ಶನಗಳನ್ನು ಮಾಡಕೂಡದೆಂದೂ ಭಾರತೀಯರಿಗೆ ತಿಳಿಸಿದೆ.

o o

ನದದೆಹಲಿ ಫೆ 1 — ಕರಾಚಿಯಲ್ಲಿ ಲೀಗ್ ಹೈಕಮ್ಯಾಂಡ್ ಸಭೆಗೊಂಡು ನಿರ್ಣಯವನ್ನು ಅಂಗೀಕರಿಸಿದ್ದು ಲಾರ್ಡ್ ವೇವೆಲ್‌ರವರಿಗೆ ಸಂತೋಷವನ್ನುಂಟು ಮಾಡಿಲ್ಲ ಎಂಬುದಾಗಿ ನಿರ್ದಿಷ್ಟವಾಗಿ ಗೊತ್ತಾಗಿರುವ ವೃತ್ತಗಳಿಂದ ತಿಳಿದು ಬರುತ್ತದೆ. ಕಾಂಗ್ರೆಸ್ ನಾಯಕರು ವೈಸ್ರಾಯರು ತಮಗಿತ್ತಿರುವ ಭರವಸೆಯನ್ನು ಯಾವ ರೀತಿ ಪಾಲಿಸುವರು ಎಂಬುದನ್ನು ಕುರಿತು ತೀವ್ರಾಸಕ್ತರಿದ್ದಾರೆ.

ಪೈಕ ನೂರಕೆ
ದಸ್ತಗಿರಿ ಮಾಡಲ್ಪಟ

.....

ಗಳಿಗೆ ಇಲೆಕ್ಟ್ರೊ ಥೆರಾಪಿ

ಕ್ಸ್ ಮುಖಂಡ ಮಿ|| ಬನಾ
ಸ್ತ್ರೀವರು ಸಿಯಾಟಿಕಾ ಅಸ್ವ
ಗುರಿಯಾದಾಗ ಅವರಿಗೆ ಇಲೆ
ಕ್ಟ್ರೊ ಥೆರಾಪಿ ಚಿಕಿತ್ಸೆ ಕೊಡಲಾಯಿತು, ಅದು ಉತ್ತಮ ಪರಿಣಾಮಕಾರಿಯಾಯಿತು. ಅದೇ ಸರ್ಕಸ್ಸಿನ ನಾಲ್ಕು ಆನೆಗಳಿಗೆ ಸೊಂಟನೋವಿರುವುದು ತಿಳಿಯಬಂದಿತ್ತು, ಆನೆಗಳನ್ನು ತಂಬೇತು ಗೊಳಿಸುವವರೊಡನೆ ಬರ್ನಾರ್ಡರು ಹೇಳಿದರು— ಅವುಗಳ ಮೇಲೂ ಎಲೆಕ್ಟ್ರೋ ಥೆರಾಪಿ ಪ್ರಯೋಗಿಸುವುದಿಲ್ಲವೇಕೆ?. ಎಂದರು ಅವಕ್ಕೂ ಪ್ರಯೋಗಿಸಲಾಯಿತು. ಆನೆಗಳ ಸೊಂಟನೋವು ದೂರವಾಯಿತು.

.....

ಸಂದಿಹಾರಿನ ಗುಡ್ಡ ನಾಡು ಜನರ ಮೇಲೆ ಭಾರತ ಸರಕಾರವು ವಿಧಿಸಿರುವ ಉಂಡು ಕಂದಾಯವನ್ನು ಖಂಡಿಸಿ ಕೇಂದ್ರ ಅಸೆಂಬ್ಲಿಯಲ್ಲಿ ಲೀಗ್ ಸದಸ್ಯರು ತಂದ ನಿಲುವಳಿ ಸೂಚನೆಯು ಹೆಚ್ಚು ಮತದಿಂದ ಬಿದ್ದುಹೋಯಿತು.

o o

ಮದರಾಸು ಫೆ 5 — ಪ್ರತಿಸಾಮಾನಿನ ಬೆಲೆಯೂ ನಿಗದಿ ಮಾಡಬೇಕಾದೀತೆಂದು ಮುಖ್ಯ ಮಂತ್ರಿ ಶ್ರೀ ಪ್ರಕಾಶಂರವರು ಶಾಸನ ಸಭೆಯಲ್ಲಿ ತಿಳಿಸಿದರು.

o o

ನವದೆಹಲಿ ಫೆ 5 — ಯುದ್ಧಕಾಲದಲ್ಲಿ ಬರ್ಮಾದಲ್ಲಿ ೧೨೩೬೭ ಮಂದಿ ಭಾರತ ಸೈನೀಕರು ಮಡಿದರೆಂದು ಪಂ|| ನೆಹರು ಅಸೆಂಬ್ಲಿಯಲ್ಲಿ ತಿಳಿಸಿದರು.

o o

ತ್ರೀನಗರ ಫೆ 5 — ಗಾಂಧೀಜಿ ತಮ್ಮ ಶಾಂತಿ ಕಾಲ್ನಡಿಗೆ ಪ್ರವಾಸದ ಎರಡನೇ ಭಾಗವನ್ನು ಇವತ್ತು ಪ್ರಾರಂಭಿಸಿದರು.

ಶ್ರೀ ದ್ವಾರ
ೀಶ ವಿಶ್ವವಿದ್ಯಾಪೀಠ ಸಮ್ಮೇಳನ
ಇದೇ ತಾ|| 2 ರಲ್ಲಿ ಬರೋಡಾ
ನ್ಯಾಯ ಮಂದಿರದಲ್ಲಿ ನಡೆಯಿತು.

ಆಶಾಪೂರಿತ ಭಾಷಣದಿಂದ ದ್ವಾರ
ಕಾಧೀಶ ಜಗದ್ಗುರು ಶ್ರೀ ಅಭಿನವ ಸಚ್ಚಿ
ದಾನಂದ ಸ್ವಾಮಿಗಳು ಪ್ರಾರ್ಥನೆ ಸ್ವಾ
ಗತ ಭಾಷಣಗಳಾದ ನಂತರ ಸಮ್ಮೇಳನ
ದ ಪ್ರಾರಂಭೋತ್ಸವವನ್ನು ನೆರವೇರಿ
ಸಿದರು.

ಶ್ರೀ ಗೋ ಸ್ವಾಮಿ ಕೃಷ್ಣ ಜೀರ್ವ
ಜೀರವರು ಸಮ್ಮೇಳನದ ಅಧ್ಯಕ್ಷತೆಯ
ನ್ನು ವಹಿಸಿ ಇತ್ತ ಅಮೋಘ ಭಾಷಣ
ದಲ್ಲಿ, ದ್ವಾರಕಾದಲ್ಲಿ ಸಧ್ಯದಲ್ಲೇ ಸ್ಥಾ
ಪಿತವಾಗುವ ದ್ವಾರಕಾಧೀಶ ವಿಶ್ವವಿ
ದ್ಯಾಲಯದ ಆಶೋತ್ತರಗಳನ್ನು ವಿವರಿ
ಸಿದರು.

ದ್ವಾರಕಾಧೀಶ ವಿಶ್ವವಿದ್ಯಾಲಯದ
ಗುರಿ ಮತ್ತು ಯೋಜನೆಗಳನ್ನು ಪ್ರೊ||
ದುಶಕಾಲ್ ನಿವರಿಸಿದರು.

ನಮ್ಮ ಪ್ರಾಚೀನ ಸಂಸ್ಕೃತಿ ಮ
ತ್ತು ಧರ್ಮ ಉನ್ನತಿಗಾಗಿ ಸ್ಥಾಪಿತವಾ
ಗುವ ದ್ವಾರಕಾಧೀಶ ವಿಶ್ವವಿದ್ಯಾಲಯ
ಕ್ಕೆ ಬೆಂಬಲ ಮತ್ತು ಸಹಕಾರ ನೀ
ಡಬೇಕೆಂದು ಹಿಂದೂ ರಾಜ ಮಹಾರಾ
ಜರುಗಳನ್ನು ಮತ್ತು ಸಾರ್ವಜನಿಕರನ್ನು
ಕೋರುವ ಒಂದು ನಿರ್ಣಯ ಅನು
ಮೋದಿತವಾಯಿತು. ವಿದ್ಯಾಲಯದ
ನವಭಾರತಿ ಪತ್ರಿಕೆಯ ಬಗ್ಗೆ ನಿರ್ಣಯ
ಅಂಗೀಕಾರವಾಯಿತು.

ಅನುಮೋದಿತವಾದ ನಿರ್ಣಯಗಳೆರ
ಡರ ಬಗ್ಗೆ ಮಹಾ ಮಹಾ ಪಂಡಿತರುಗ
ಳು ಉಜ್ವಲ ಭಾಷಣ ಮಾಡಿದರು.

ಹಿಂದೂಸ್ಥಾನ ಮತ್ತು ಹಿಂದೂ ಧ
ರ್ಮ ಉನ್ನತಿಗಳಸ್ತು ಗಳಿಸಬೇಕು
ದ್ವಾರಕಾ ವಿಶ್ವವಿದ್ಯಾಲಯಕ್ಕೆ ರಾಜ
ಮಹಾರಾಜರುಗಳು ಬೆಂಬಲವೀಯುವು
ದೇ ಇದಕ್ಕೆ ಸಹಾಯಕರವು ಎಂಬು
ದಾಗಿ ವಿಶ್ವವಿದ್ಯಾಲಯಕ್ಕೆ ಮೂಲ
ಕಾರಣರಾದ ಶ್ರೀ ಜಗದ್ಗುರು ಶಂಕರಾ
ಚಾರ್ಯರು ಹಿಂದೂ ಸಂಸ್ಕೃತಿ
ಮತ್ತು ಅದರ ಮಹತ್ವವನ್ನು ಕುರಿ
ತು ಭಾಷಣ ಮಾಡುತ್ತಾ ಧರ್ಮ ರಕ್ಷ
ಣೆ ಅತ್ಯಗತ್ಯವೆಂದರು.

ವಂದನಾರ್ಪಣೆಯಾದನಂತರ ವೈ
ಭವದಿಂದ ಸಮಾವೇಶಗೊಂಡಿದ್ದ ಸ
ಮ್ಮೇಳನ ನಿನ್ನೆಯ ದಿವಸ ಮಂಗಳದಿಂದ
ಮುಕ್ತಾಯವಾಯಿತು.

ಮತದ
ಪ್ಪಿಸಿ ಬ
ರಾಯಿತು. ಇದ
ತಂಬಾ ಭಯಂಕರ
ಈ ಬಹುಮತವೇ ಹಿ
ಸ್ಟಾಲಿನ್ನರನ್ನು ಅಧಿ
ಸುಕರನ್ನಾಗಿ ಮಾಡಿದೆ. ನಮ್ಮ
ಲ್ಲಿಯ ರಾಜ ನೀತಿ ಶಾಸ್ತ್ರದಲ್ಲಿ ಈ
ರೀತಿಯ ಅನಿಯಂತ್ರಿತ ಸತ್ತೆಯಾಗಲಿ
ಯಾರ ಕಯ್ಯಲ್ಲಿಯೂ ಇಲ್ಲ. ಅರಸ
ನು ಈಶ್ವರನ ಅಂಶನೆಂದು ತಿಳಿಯಲ್ಪಟ್ಟಿ
ರುವನಾದಾಗ್ಯೂ ಅವನೂ ಸ್ವತಂತ್ರ
ನಲ್ಲ. ಮನ ಬಂದಂತೆ ಆತನು ಕಾ
ನೂನು ಮಾಡಲಾರನು ಅವನಾದರೋ
ಕೇವಲ ಋಷಿ-ಮಹರ್ಷಿಗಳಿಂದ ಮಾ
ಡಲ್ಪಟ್ಟ ನಿಯಮಗಳಿಗನುಸಾರವಾಗಿ
ಶಾಸನ ಮಾಡಬಲ್ಲನು ಪ್ರಜೆಗಳನ್ನು
ರಕ್ಷಿಸುವುದೂ ಪಾಲಿಸುವುದೂ ಎಲ್ಲರ
ನ್ನೂ ತಮ್ಮ ತಮ್ಮ ಧರ್ಮದಲ್ಲಿ ನಿಯೋ
ಜಿಸಿಡುವುದೂ ಅವನ ಕರ್ತವ್ಯ. ಅ
ವನು ಸ್ವಾಮಿಯಾದಾಗ್ಯೂ ಪ್ರಜೆಯ
ಸೇವಕನು. ಅವನಿಗೆ ಸಿಗುವ ಕಂವೇ ಆ
ತನ ವೇತನ - ' ವಿಭಾಗಭೃತ್ಯಾ ದಾಸ್ಯೆ
ತ್ವೇ ಪ್ರಜಾನಾಂಚ ನೃಪಃ ಕೃತಃ '
ಯಾವನು ಸ್ವಧರ್ಮದಲ್ಲಿ ತತ್ಪರನೋ ಆ
ಅರಸನೇ ದೇವಾಂಶನು ಇತರನು ರಾ
ಕ್ಷಸನು — ' ಯೋಹಿ ಧರ್ಮಪರೋ
ರಾಜಾ ದೇವಾಂ ಶ್ಯೋನ್ಯಶ್ಚ ರಾಕ್ಷಸಃ
ಮಹಾಭಾರತದ ಅನುಶಾಸನಿಕ ಪರ್ವದ
ಲ್ಲಿ - ದುಷ್ಟ ರಾಜನನು ಸ್ವಲ್ಪವೂದಯೆ
ದೋರದೆ ಸಮಾಚಾರ ತಕೊಳ್ಳಬೇಕು
ಅವನನ್ನು ಹುಚ್ಚುನಾಯಿಯೆಂದು ತಿಳಿ
ದು ಅವನೊಂದಿಗೆ ವ್ಯವಹರಿಸಬೇಕು—
ಎಂದು ಹೇಳಿದೆ — ಸಸಂಹಶ್ಚ ನಿಹಂತ
ವ್ಯಃ ಶ್ವೇವ ಸೋನ್ಮಾದ ಆತುರಃ
ಮುಂದಿನ ಸೋಮವಾರದ ಪತ್ರಿಕೆ
ನೋಡಿ.

——

ವಾ
ವೈಶಿಷ್ಟ್ಯಗಳ ಕಡೆಗೇ ನಾವು ಗಮನ
ಹುಟ್ಟಿಸಬೇಕಾಗಿದೆ.

ಪಾಶ್ಚಾತ್ಯ ರಾಜ ನೀತಿ ಶಾಸ್ತ್ರದ
ಸರ್ವ ಸಮ್ಮತವಾದೊಂದು ಸಿದ್ಧಾಂತ
ವೇನೆಂದರೆ ಯಾರಲ್ಲಿ ರಾಜಸತ್ತೆಯಿದೆ
ಯೋ ಅವನು ಓರ್ವ ವ್ಯಕ್ತಿಯಾಗಲೀ
ರಾಜನಾಗಲೀ ರಾಷ್ಟ್ರಪತಿಯಾಗಲಿ ಆಗಿ
ರಲಿ ಅಥವಾ ಸಂಸ್ಥೆಯಾಗಲಿ ಪಾರ್ಲಿ
ಮೆಂಟಾದಿಗಳೇ ಆಗಲಿ ಆಗಿರಲಿ ಅವನಿ
ಗೆ (ಅಥವಾ ಅದಕ್ಕೆ) ರಾಜಸತ್ತೆಯು ಚು
ನಾವಣೆ ಮೂಲಕವಾಗಿಯಾಗಲಿ ಪ
ರಂ ಪರಾಗತವಾಗಿಯಾಗಲಿ ಬಂದಿರಲಿ
ಅವನಿಗೆ (ಅಥವಾ ಅದಕ್ಕೆ) ಕಾನೂನು
ಗಳನ್ನು ಮಾಡಲಿಕ್ಕೆ ಸಂಪೂರ್ಣ ಸ್ವಾ
ತಂತ್ರ್ಯವಿದೆ. ಸಮಸ್ತ ಅಧಿಕಾರಿಗಳಿ
ಗೂ ಅವನೇ (ಅದೇ) ಉದ್ಗಮಸ್ಥಾನ
ವು ಆದುದರಿಂದಲೇ ಅವರಲ್ಲಿ ರಾಜನಿಂ
ದೂ ಅಪರಾಧ ಮಾಡನು ಎಂಬ ಗಾದೆ
ಯಿದೆ ಲೋಕತಂತ್ರದಲ್ಲಿ ಲೋಕ ಅಥ
ವಾ ಚುನಾಯಿಸುವವರಲ್ಲಿ ಈ ಸತ್ತೆ(ಅ
ಧಿಕಾರ) ಯು ಹುನ್ನಿಸಲ್ಪಡುತ್ತದೆ. ಅ
ದರಿಂದ ನಿಯುಕ್ತವಾದ ಸಂಸ್ಥೆಯಲ್ಲಿ
ಅಥವಾ ಪಾರ್ಲಿಮೆಂಟಿನಲ್ಲಿ ಪ್ರತಿನಿಧಿ
ಯಾಗಿ ಇದೇ ಸತ್ತೆಯಿರುತ್ತದೆ. ಮ
ತ್ತು ಸತ್ತೆಯು ಬಲದ ಮೇಲೆ ಅದು ' ಕರಿ
ದು ಬಿಳಿದು ' ಏನು ಬೇಕಾದರೂ ಮಾಡ
ಬಹುದು ವಾಸ್ತವಿಕವಾಗಿ ವ್ಯಕ್ತಿಯ
ಲ್ಲಾಗಲಿ ಸಂಸ್ಥೆಯಲ್ಲೇ ಆಗಲಿ ಯಾರ
ಲ್ಲಿಯೂ ಅನಿಯಂತ್ರಿತ ರಾಜ ಸ
ತ್ತೆಯನ್ನು ಅಥವಾ ಶಕ್ತಿಯನ್ನು ಮನ್ನಿ

ಾಲುವು
ಗಿಂತ ಮೇಲಾದುದು ಲೋ
ನೂ ಕಾಣಿಸುವುದೇ ಇಲ್ಲ.
ರಿಂದಲೇ ಇವರೊಳಗೆ ರಾಷ್ಟ್ರೀಯ
ಷ್ಟಿಕೋಣದವರೆಂದೆಣಿಸಲ್ಪಡು ವ
ಪ್ರಯತ್ನವೂ ಸಹ ಹೇಗಾದರೂ
ಒಗೆಯಿಂದ ಆ ಆದರ್ಶಗಳನ್ನು ಪಾ
ನ ಭಾರತೀಯಾದರ್ಶಗಳಲ್ಲಿ
ತೆಗೆಯುವುದೇ ಆಗಿರುತ್ತದೆ.
ದರೆ ಅವರ ದೃಷ್ಟಿಯಲ್ಲಿ ತಮ್ಮ ಮೇ
ಜನರಿಗೆ ಶ್ರದ್ಧೆ ಹುಟ್ಟಿಸಿಕೊಳ್ಳಲು ಇ
ದೇ ಒಂದುಪಾಯವಾಗಿದೆ. ಇದರ ಸಹಾ
ಯದಿಂದ ಪಾಶ್ಚಾತ್ಯ ವಿದ್ವಾಂಸರ ಹ
ತ್ತಿರ ಸಹ ನಿಮಗೆ ಯಾವ ಆದರ್ಶಗಳಲ್ಲಿ
ಗರ್ವವಿದೆಯೋ ಅವು ನಿಮ್ಮ ಸೈತೃಕಗಳೇ
ಅಲ್ಲ. ನಿಮಗಿಂತ ನೂರಾರು ವರ್ಷ
ಮುಂಚೆಯೇ ನಿಮ್ಮ ಪೂರ್ವಜರುಗಳ
ನ್ನು ಹುಡುಕಿ ಹಿಡಿದಿದ್ದರು. ಎಂದು
ಹೇಳಲಿಕ್ಕಾಗುವುದು ಇದೇ ಹುಚ್ಚು ತ
ಗಲಿದ ಅನೇಕ ವಿದ್ವಾಂಸರು ವೋಟುಗ
ಳನ್ನವಲಂಬಿಸಿಕೊಂಡಿರುವ ಆಧುನಿಕ
ಲೋಕತಂತ್ರ (ಬಿಲಟ್ ಬಾಕ್ಸ್ ಡೆಮಾ
ಕ್ರೆಸಿ)ವನ್ನು ಭಾರತದ ಪ್ರಾಚೀನ ರಾಜ
ನೀತಿ ಶಾಸ್ತ್ರದಲ್ಲಿ ಹುಡುಕಿ ತೆಗೆದಿಡ್ದಾ
ರೆ. ಯಾವ ರೀತಿ ಪ್ರತಿನಿಧಿಗಳಾರಿಸ
ಲ್ಪಡುತ್ತಿದ್ದರೆಂದೂ ಯಾವ ತೆರನಾಗಿ
ವೋಟು ತೆಗೆಯಲ್ಪಡುತ್ತಿದ್ದಿತೆಂದೂ ಆ
ವುಗಳ ಗಣನೆ ಹೇಗೆ ನಡೆಯುತ್ತಿದ್ದಿತೆಂ
ದೂ ಯಾವ ಬಗೆಯಿಂದ ಪ್ರಸ್ತಾಪಗಳು
ತರಲ್ಪಡುತ್ತಿದ್ದುವೆಂದೂ ಯಾವ ವಿಧದ
ಲ್ಲವುಗಳ ಮೇಲೆ ಚರ್ಚೆಯೇಳುತ್ತಿದ್ದು
ವೆಂದೂ ಒಟ್ಟಾರೆ ಈಗಿನ ಕಾಲದಲ್ಲಿ
ಯಾವ್ಯಾವ ಸೋಗು ಕಂಡು ಬರುತ್ತಿ
ದೆಯೋ ಇವೆಲ್ಲವೂ ಪೂರ್ಣತಯಾ ಅ
ಲ್ಲದಿದ್ದರೂ ಅಧಿಕಾಂಶದಲ್ಲಿ ಖಂಡಿತ
ವಾಗಿಯೂ ಪ್ರಾಚೀನ ಭಾರತದ ಪಾ
ರ್ಲಿಮೆಂಟುಗಳಾಲ್ಲಾಗುತ್ತಿದ್ದುವೆಂದೂ
ಇವರ ಹೇಳಿಕೆ. ಇಲ್ಲಿ ನಾವು ಐತಿಹಾ
ಸಿಕ ವಿವೇಚನೆಗಳಲ್ಲಿ ಬೀಳಬೇಕಾಗಿಲ್ಲ
ಆದರೆ ಇಷ್ಟನ್ನು ಮಾತ್ರ ಸಂಕೋಚವಿ
ಲ್ಲದೆ ಅವಶ್ಯವಾಗಿ ನಾವು ಹೇಳಬಲ್ಲೆವು

ಶ್ರೀ ಗಾಂಧಿಯವರು ಬಂಗಾಳ ರಾಷ್ಟ್ರ ಸಂಚಾರದಲ್ಲಿ ಒಂದು ಕಡೆಯಲ್ಲಿ ಈಗ ಗಲಾಟೆಗಳಲ್ಲಿ ಕಿತ್ತುಹಾಕಲ್ಪಟ್ಟಿದ್ದ ದೇವತಾ ವಿಗ್ರಹವೊಂದನ್ನು ಒಂದು ಮನೆಗೆ ಸೇರಿಕೊಂಡಿದ್ದ ದೇವಾಲಯದಲ್ಲಿ ಪ್ರತಿಷ್ಠೆ ಮಾಡಿದರೆಂದು ತಿಳಿಯಬಂದಿದೆ. ಶ್ರೀ ಗಾಂಧೀಯವರಿಗೆ ಆಗಮ ಶಾಸ್ತ್ರಾನುಸಾರ ದೇವತಾ ಪ್ರತಿಷ್ಠಾಧಿಕಾರವು ಇದೆಯೇ ಇಲ್ಲವೇ ಎಂಬುದು ವಿಚಾರಣೀಯವಾದ ಅಂಶವೇ ಆಗಿದೆ ಅದು ಹಾಗಿರಲಿ. ಅತಸೇ ದೇವರಿಂದು ಕೂಡ ಭಾವಿಸುವವರುವರಷ್ಟೆ ! ಅವರ ಸ್ವೇಚ್ಛೆಯನ್ನೂ ಯಾರೂ ಅಲ್ಲವೆನ್ನಲಾಗದು. ಮಂತ್ರ ತಂತ್ರ ಕ್ರಿಯಾಹೀನವಾಗಿ ಕೆಲವು ಹುವ್ವುಗಳನ್ನೂ ಗರಿಕೆಯ ಎಸಳುಗಳನ್ನು ಅವಿಗ್ರಹದ ಮೇಲೆ ಹಾಕಿ ಸ್ವಲ್ಪ ಗಂಧವನ್ನೂ ಹಚ್ಚಿ ವಿಗ್ರಹ ಪ್ರತಿಷ್ಠೆ ಮಾಡಿದರು. ಪ್ರತಿಷ್ಠೆ ಮಾಡಿ ಹೊರಗೆ ಬರುವ ಸಮಯಕ್ಕೆ ಮುಸಲ್ಮಾನರು ಕೆಲವರು ಬಂದು ಇನ್ನು ಮುಂದೆ ತಾವು

ಅ...
ಳ ಧೈ
ರ್ಯ್ಯಗಳ

||ನಂದಿ
ಶ್ರೇಷ್ಠ
ರಾಜಪುರಿ ಹೊಗೇಸೊಪ್ಪು
—ತಯಾರಿಸಲ್ಪಟ್ಟ
ಕಾಂಗ್ರೆ
(ರಿಜಿಸ್ಟರ್ಡ್)
ಮಂಗಳೂರು
ಬೀಡಿಗಳು
ಜೆ. ಎಸ್. ಟೊಬ್ಯಾಕೊ ವರ್ಕ್ಸ್
ಬಸ್ ಟರ್ಮಿನಸ್, ಮೈಸೂರು.

At Opera ☰ From 4–2–47
THE SECRET CODE
Next Change ☰ Stagedoor Canteen
Morning Shows from 7—2—47 — PINOCCHIO

ಕನ್ನಡನಾಡಿನ ಪ್ರಖ್ಯಾತ ನಟನಟಿಯರ ಅಭಿನಯಿಸಿರುವ
ಮಹಾತ್ಮಾರವರ ಅಮೋಘ ಕನ್ನಡ ಚಿತ್ರ
ಕೃಷ್ಣಲೀಲಾ
14–2–47 ರಲ್ಲಿ ಪ್ರಾರಂಭ
ಮೈಸೂರು ರಾಜ್ ಕಮಲ್'ನಲ್ಲಿ
ಬೆಂಗಳೂರು ಸ್ವಾಸ್ತಿಕ್, ಶಾರದಾ
ಮತ್ತು ಕರ್ನಾಟಕದ ಪ್ರಮುಖ ಪಟ್ಟಣಗಳಲ್ಲಿ.
ಹಂಚಿಕೆ— ಮಹಾತ್ಮಾ ಪಿಕ್ಚರ್ಸ್,
165 ಗಾಂಧಿನಗರ, ಬೆಂಗಳೂರು ಸಿಟಿ
Vijaya Agencies, Mysore

Edited, Printed and Published by M. S Krishna Rao at the Satyawadi Press ChamarajAgra-har, Mysore.

ಕ
ನ ಉತ್ಕೃಷ್ಟ
ಉಪಯೋಗಿಸಿ.
ರಾದುದು. ನೀರನ್ನು ಸೇ
ಪುಳ್ಳದ್ದು. ಎಲ್ಲಾ ಸನಾ
ಪ್ಪು. ಒಂದು ಚಿಕ್ಕ ಚಿ
ಲ್ಲಿ ಹಾಕಿದಲ್ಲಿ ದೀರ್ಘ
ವುದಲ್ಲದೆ, ಹೆಚ್ಚು ರುಚಿ
ಯನ್ನು ವ್ಯಾಧಿಗಳಿಗೂ ಒಂದು ಸಂಪಾ
ರಿಕ ಔಷಧವು ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂ
ಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸು
ವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂ
ಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು
ಪೌಂಡಿಗೆ ರೂ. 3-8-0 ಮಾತ್ರ.
ನಮ್ಮ ಸುಘಂದ ಅಡಿಕೆವುಡಿ ಒಂದು ವೈಶಿಷ್ಟ್ಯ.
ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾ
ತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —
ವಲ್ಲಭದಾಸ್ ತೇಜ್ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಸೈಟುಗಳ ಹರಾಜು

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—

ಮೈಸೂರು ಸಿಟಿ ವಾಣೀವಿಲಾಸ ಮೊಹಲ್ಲಾದಲ್ಲಿ ಗೋಕುಲಂ ರೋಡಿನ ಪಶ್ಚಿಮ ದಿಕ್ಕಿನಲ್ಲಿರುವ ಕಾಟೇಜ್ ಮತ್ತು ಬಂಗ್ಲೋ ಸೈಟುಗಳನ್ನು ತಾ || 12–1–47 ನೇ ಮಕ್ರಂ ಹರಾಜು ಇಸ್ಮಿಹಾರ್ ನಾಮೆಯ ಪರತ್ಯುಗಳಿಗೆ ವಳಪಡಿಸಿ ತಾ || 16–2–1947 ನೇ ಭಾನುವಾರ ಬೆಳಿಗ್ಗೆ 9–30 ಘಂಟೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ.

ಇತರ ವಿವರಗಳನ್ನು ಆಫೀಸಿನಲ್ಲಿ ರಜಾದಿನಗಳಲ್ಲದ ಇತರ ದಿವಸಗಳಲ್ಲಿ 11 ಘಂಟೆಯಿಂದ 5 ಘಂಟೆವರೆಗೆ ತಿಳಿಯಬಹುದು.

(Sd) **K. Venkatesha Iyer**
For Chairman
City Improvement Trust Board, Mysore